[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 1251/2022**

**...............................................Vs...................................**

ಸಾಕ್ಷಿದಾರನ ಹೆಸರು ಃ ಡಾ. ಸವಿತಾ ಎನ್ ಪಿ.ಡಬ್ಲ್ಯೂಃ 16

ತಂದೆ ಹೆಸರುಃ ಅಪ್ಪು ಸಿ.ಡಬ್ಲ್ಯೂಃ 24

ಪ್ರಾಯ ಃ 44 ವರ್ಷ

ಉದ್ಯೋಗ ಃ ವೈದ್ಯಾಧಿಕಾರಿ, ಸಸ್ತಾನ

ವಾಸ ಃ ಬ್ರಹ್ಮಾವರ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 19-11-2024

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು 2018 ರಿಂದ ಸಸ್ತಾನದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 05-06-2021 ರಂದು ಕಾರ್ಕಳ ನಗರ ಠಾಣಾ ಉಪನಿರೀಕ್ಷಕರು 1 ನೇ ಆರೋಪಿಯು ಗರ್ಭಾವತಿ ಆಗಿದ್ದಾರೆಯೇ ಹಾಗೂ ನಿಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಪಡೆಯಲಾಗಿದೆಯಾ ಎಂಬ ಬಗ್ಗೆ ಹಾಗೂ ದಾಖಲೆಗಳನ್ನು ಕೇಳಿ ನಿವೇದನೆ ನೀಡಿರುತ್ತಾರೆ. ಅದರಂತೆ ನಾನು ದಿಃ 09-06-2021 ರಂದು 1 ನೇ ಆರೋಪಿಯು ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಹಾಗೂ ಯಾವುದೇ ತಾಯಿ ಕಾರ್ಡ್ ಅನ್ನು ನೀಡಿರುವುದಿಲ್ಲ ಎಂದು ಪ್ರಮಾಣಪತ್ರ ನೀಡಿರುತ್ತೇನೆ ಅಲ್ಲದೇ ಪೋಲಿಸರು ಕೇಳಿದ 1 ನೇ ಆರೋಪಿಯ ವಾಸ ಮಾಡುವ ಹತ್ತಿರದ ಆಶಾ ಕಾರ್ಯಕರ್ತೆಯ ವಿಳಾಸ ನೀಡಿರುತ್ತೇನೆ.

ಸಾಕ್ಷಿಯು ತಾನು ನೀಡಿದ ಪ್ರಮಾಣಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಮಾಣ ಪತ್ರವನ್ನು ನಿಪಿ15 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು 15(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4 ನೇ ಆರೋಪಿತರ ಪರಃ ಶ್ರೀ ಹೆಚ್ ಆರ್ ಕೆ ವಕೀಲರಿಂದಃ**

2018 ರಿಂದ ನಾನು ಸಸ್ತಾನದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಪಿ-15 ಗಾಯದ ಪ್ರಮಾಣ ಪತ್ರದ ನಮೂನೆ ಎಂದರೆ ಸರಿ ಪೋಲಿಸ್ ನವರು ನನಗೆ ನೀಡಿದ್ದಾರೆ ಎಂದು ಹೇಳಲಾದ ನಿವೇದನೆಯಲ್ಲಿ ಅಪರಾಧ ಸಂಖ್ಯೆ ನಮೂದಿಸಲಾಗಿತ್ತು. ನಿಪಿ-15 ರಲ್ಲಿ ಅಪರಾಧ ಸಂಖ್ಯೆಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ಉತ್ತರವನ್ನು ಕವರಿಂಗ್ ಲೇಟರ್ ಮೂಲಕ ಪೋಲಿಸರಿಗೆ ನೀಡಿರುತ್ತೇನೆ. 1 ನೇ ಆರೋಪಿಯನ್ನು ನಾನು ಕರೆಯಿಸಿ ಯಾವುದೇ ದೈಹಿಕ ಪರೀಕ್ಷೆ ಮಾಡಿರುವುದಿಲ್ಲ. ಯಾವುದೇ ಮಹಿಳೆಯನ್ನು ದೈಹಿಕವಾಗಿ ಪರೀಕ್ಷೆ ಮಾಡಿದರೆ ಮಾತ್ರ ಅವರು ಗರ್ಭವತಿ ಹೌದಾ ಇಲ್ಲವೋ ಎಂದು ಗೊತ್ತಾಗುತ್ತದೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ